# ಶರಣಾಗತಿಗೊಂದು ಉನ್ನತ ನಿದರ್ಶನ:
# ಸ್ವಾಮಿ ಅದ್ಭುತಾನಂದರು

ಎದುರ್ಕಳ ಕೆ. ಶಂಕರನಾರಾಯಣ ಭಟ್

ಸ್ವಾಮಿ ಅದ್ಭುತಾನಂದರು ಶ್ರೀ ರಾಮಕೃಷ್ಣರಿಂದಾದ ಒಂದು ಅದ್ಭುತ ಪವಾಡ ಎನ್ನುತ್ತಾರೆ ಸ್ವಾಮಿ ವಿವೇಕಾನಂದರು. ಅಂತಹ ಮಹಾನ್ ವ್ಯಕ್ತಿಯ ಅದ್ಭುತ ಜೀವನದ ಕಿರು ಪರಿಚಯ ನೀಡಿದ್ದಾರೆ ಶ್ರೀ ಶಂಕರನಾರಾಯಣ ಭಟ್ಟರು. ಹಿಂದೂಧರ್ಮ ಮತ್ತು ಸಂಸ್ಕೃತಿಯ ವಿಶೇಷ ಅಧ್ಯಯನ ನಡೆಸಿರುವ ಶ್ರೀಯುತರು ಆ ಸಂಬಂಧವಾಗಿ ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ.

---

ಕಲ್ಕತ್ತೆಯ ದಕ್ಷಿಣೇಶ್ವರದಲ್ಲಿನ ಭವತಾರಿಣೀ ಕಾಳಿ ಮಂದಿರದ ಬಳಿ ಗಂಗಾ ನದಿಯ ದಂಡೆಯಲ್ಲಿ ಯುವಕನೊಬ್ಬ ದಿವ್ಯ ಧ್ಯಾನಾಸಕ್ತನಾಗಿ ಕುಳಿತಿದ್ದಾನೆ. ಗಂಗೆಯಲ್ಲಿ ನೀರಿನ ಉಬ್ಬರ ಏರಹತ್ತಿದೆ. ಯುವಕನಿಗೆ ಬಾಹ್ಯಪ್ರಪಂಚದ ಪರಿವೆಯೇ ಇಲ್ಲ. ನೀರಿನ ಉಬ್ಬರ ಹೆಚ್ಚಿದಂತೆ ಜಲದ ಅಲೆಗಳು ಧ್ಯಾನಮಗ್ನನಾದ ಯುವಕನನ್ನು ಆವರಿಸಹತ್ತಿದವು.

ಅಷ್ಟರಲ್ಲಿ ಶ್ರೀಕಾಳೀಮಂದಿರದ ಕಡೆಯಿಂದ ದಿವ್ಯತೇಜೋಮಂತರಾದ ನಡುವಯಸ್ಸಿನ ಮಹನೀಯರೊಬ್ಬರು ಬಂದು ಯುವಕನ ಬಳಿ ನಿಂತು 'ಲಾಟೂ' ಎಂದು ಗಟ್ಟಿಯಾಗಿ ಕರೆದರು. ಲಾಟುವನ್ನು ಮುಟ್ಟಿ ಅವನಿಗೆ ಬಾಹ್ಯಪ್ರಜ್ಞೆ ಬರುವಂತೆ ಮಾಡಿದರು. ಹೀಗೆ ಅಂದು ಆ ಯುವಕ ಲಾಟು ಗಂಗೆಗೆ ಆಹುತಿಯಾಗುವುದು ದೈವಾನುಗ್ರಹದಿಂದ ತಪ್ಪಿದಂತಾಯಿತು. ಅಂದಿನ ಲಾಟುವೇ ಮುಂದೆ ಸ್ವಾಮಿ ಅದ್ಭುತಾನಂದ ಎಂದು ಪ್ರಖ್ಯಾತರಾಗಿ ಶ್ರೀರಾಮಕೃಷ್ಣರ ಸಂನ್ಯಾಸೀ ಶಿಷ್ಯರಲ್ಲಿ ಒಬ್ಬರೆಂದು ಸ್ಮೃತಿಪೂಜ್ಯ ರಾಗಿರುತ್ತಾರೆ.

ಇನ್ನೊಂದು ದಿನ. ದಕ್ಷಿಣೇಶ್ವರದ ಕಾಳೀಮಂದಿರದಲ್ಲಿ ಲಾಟುವು ದಿವ್ಯ ಧ್ಯಾನಾಸಕ್ತನಾಗಿ ಕುಳಿತಿದ್ದಾನೆ. ಬೇಸಗೆಯ ಕಾಲ. ಮೈಮೇಲೆಲ್ಲಾ ಬೆವರು ಹೆಚ್ಚಾಗಿ ಸುರಿಯುತ್ತಿದೆ. ಆಗ ಅದೇ ತೇಜೋವದನರಾದ ಮಹನೀಯರು ಬಂದು ಲಾಟುವಿನ ಬಳಿ ಕುಳಿತು ಬೀಸಣಿಗೆಯಿಂದ ಗಾಳಿ ಬೀಸಿ ಅವನಿಗೆ ಉಪಚರಿಸುತ್ತಿದ್ದರು. ಲಾಟುವಿಗೆ ಬಾಹ್ಯಪ್ರಜ್ಞೆ ಬಂದ ನಂತರ ನೋಡುತ್ತಾನೆ, ತನ್ನ ಗುರುದೇವ, ದೇವಮಾನವ ಶ್ರೀರಾಮಕೃಷ್ಣ ಪರಮಹಂಸರು ತನ್ನ ಮುಂದೆ ಬೀಸಣಿಗೆ ಹಿಡಿದು ತನಗುಪಚರಿಸುತ್ತಾ ಕುಳಿತಿದ್ದರು! ಗುರುದೇವನ ಪದತಲದಲ್ಲಿ ಶಿರಬಾಗಿ ನಮಿಸಿ 'ಇದೇನು ಮಾಡುತ್ತಿದ್ದೀರಿ ಗುರುದೇವಾ?' ಎಂದು ಸಂಕೋಚಪಡುತ್ತಾ ಕೇಳಿದ. 'ಸಂಕೋಚವೇಕೆ ಪಡುತ್ತೀ? ನಿನ್ನ ಹಿತಕ್ಕಾಗಿಯೇ ಉಪಚರಿಸಿದ್ದಾಗಿದೆ, ಲಾಟೂ' ಎಂದು ದಿವ್ಯ ನಗುವನ್ನು ಸೂಸುತ್ತಾ ಕರುಣೆಯ ಗಂಗೆ ಶ್ರೀರಾಮಕೃಷ್ಣರು ಅಂದು ಲಾಟುವಿಗೆ ಸಮಾಧಾನ ಹೇಳಿದರು.

ಭಗವಂತನ ಸಾಕ್ಷಾತ್ಕಾರಕ್ಕೆ ಶರಣಾಗತಿಯೊಂದು ಉತ್ತಮ ಹಾದಿ ಎನ್ನುವುದು ಆಧ್ಯಾತ್ಮಿಕ ಸಾಧಕರ ಅನುಭವಸತ್ಯವಾಗಿರುತ್ತದೆ. **ಮಾಮೇಕಂ ಶರಣಂ ವ್ರಜ**—ನನ್ನಲ್ಲಿಯೇ ಶರಣಾಗು, **ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ**—ನಾನು ನಿನ್ನನ್ನು ಸಕಲ ಪಾಪಗಳಿಂದ ಮುಕ್ತನನ್ನಾಗಿಸುತ್ತೇನೆ ಎಂಬುದಾಗಿ ಭಗವಂತ ಶ್ರೀಕೃಷ್ಣನು ಗೀತೋಪದೇಶದ ಮೂಲಕ ಸಾರಿ ಶರಣಾಗತಿಯ ಹಿರಿಮೆಯನ್ನು ಸ್ಪಷ್ಟಪಡಿಸಿರುತ್ತಾನೆ. ಸ್ವಾಮಿ ಅದ್ಭುತಾನಂದರ ಬದುಕು ಅರಳಿ ಬೆಳಗಿದ ಕಥೆ ಈ ಗೀತೋಕ್ತಿಗೊಂದು ಉಜ್ವಲ ಉದಾಹರಣೆ, ಅರ್ಥಪೂರ್ಣ ಭಾಷ್ಯವೇ ಸರಿ.

ತನಗೆ ಪೂರ್ಣವಾಗಿ ಶರಣಾಗೆಂದು ಹೇಳಿದ ಭಗವಾನ್ ಶ್ರೀಕೃಷ್ಣನ ಮಾತಿನಲ್ಲಿ ಶರಣು ಆಗಬೇಕಾದುದು ಮಾತ್ರ ಮುಖ್ಯವೇ ವಿನಃ ಶರಣಾಗುವವನಿಗೆ ವಿದ್ಯೆ, ಅಂತಸ್ತು, ಅಧಿಕಾರ, ಹಣ ಎಷ್ಟಿದೆ ಎಂಬುದರ ವಿವರ ಬೇಕಿಲ್ಲ ಎನ್ನುವುದು ಸುಸ್ಪಷ್ಟವಿದೆ. **ಮನ್ಮನಾಭವ ಮದ್ಭಕ್ತಃ**—ನನ್ನಲ್ಲಿಯೇ ಮನಸ್ಸು ಉಳ್ಳವನಾಗು, ನನ್ನ ಭಕ್ತನಾಗು ಎಂದು ಹೇಳಿರುವ ಭಗವಂತ ಶ್ರೀಕೃಷ್ಣನು **ನ ಮೇ ಭಕ್ತಃ ಪ್ರಣಶ್ಯತಿ**—ನನ್ನ ಭಕ್ತನಾದವನು ಹಾಳಾಗುವುದಿಲ್ಲ ಎಂದು ಆಶ್ವಾಸನೆಯನ್ನು ನೀಡಿರುತ್ತಾನೆ. ಇದರಿಂದ ಭಗವಂತನ ಸಾಕ್ಷಾತ್ಕಾರಕ್ಕೆ ಶರಣಾಗತಿಯು ಅನುಕೂಲದ ಹಾದಿ, ಶರಣಾಗತಿಯ ದಾರಿಯಲ್ಲಿ ಪ್ರಗತಿ ಸಾಧಿಸಲು ಸಾಧಕನು ಭಕ್ತನಾಗಿರಬೇಕು—ಎಂಬುದು ಸ್ಪಷ್ಟವಾಗುತ್ತದೆ. ಆಧುನಿಕ ಕಾಲದಲ್ಲಿ ಲೌಕಿಕ ವಿದ್ಯೆ, ವಿಚಾರವೈಭವ, ಸುಖಸಂಪತ್ತುಗಳ ಪ್ರಭಾವದ ಮಧ್ಯೆ ಇದ್ದುಕೊಂಡು ವಿದ್ಯಾವಂತ, ಧನಿಕ ಏನೂ ಆಗಿರದ 'ಲಾಟು' ಎಂಬ ಹುಡುಗ ತನ್ನ ಎಳೆ ವಯಸ್ಸಿನಲ್ಲಿ ಭಗವಾನ್ ಶ್ರೀ ರಾಮಕೃಷ್ಣ ಪರಮಹಂಸರಲ್ಲಿ ಶರಣಾಗಿ ಶಿಷ್ಯವೃತ್ತಿಯನ್ನು ಕೈಗೊಂಡು ಶರಣಾಗತಿಯ ಹಾದಿಯಲ್ಲಿ

> ನೀವು ಭಗವಂತನಿಗಿಂತಲೂ ನಿಮ್ಮ ಬುದ್ಧಿ, ಅಭಿಮಾನಗಳಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಡುತ್ತೀರಿ. ಅವನ ಆದೇಶಕ್ಕಾಗಿ ನಿರೀಕ್ಷಿಸಲು ಮನವೊಪ್ಪುವುದಿಲ್ಲ. ಸ್ವಲ್ಪದರಲ್ಲೇ ಧೈರ್ಯಗೆಡುತ್ತೀರಿ. ಅದಕ್ಕೇ ಅವನಲ್ಲಿ ನಿರ್ಭರತೆ ಉಂಟಾಗುವುದಿಲ್ಲ.
>
> —ಸ್ವಾಮಿ ಅದ್ಭುತಾನಂದ

ಸಾಗಿ ಗುರುಕೃಪೆಯಿಂದ ಸಿದ್ಧಿ ಹೊಂದಿ ಬಾಳಿನಲ್ಲಿ ಸ್ವಾಮಿ ಅದ್ಭುತಾನಂದರಾಗಿ ಅರಳಿ ಬೆಳಗಿರುವುದು ನಿಜಕ್ಕೂ ಧಾರ್ಮಿಕ ರಂಗದಲ್ಲಿ ಒಂದು ಅದ್ಭುತ ವೃತ್ತಾಂತವೇ ಸರಿ.

ಬಿಹಾರದ ಬಡಕುಟುಂಬವೊಂದರಲ್ಲಿ ಜನಿಸಿದ ಲಾಟುವಿಗೆ ಬಾಲ್ಯದಲ್ಲಿ ಅಕ್ಷರಾಭ್ಯಾಸಕ್ಕೆ ಅನುಕೂಲವಿರಲಿಲ್ಲ. ತನ್ನ ಬಳಿ ಶಿಷ್ಯನಾಗಿ ಬಂದ ಲಾಟುವಿನ ಬಗೆಗೆ ಗುರುದೇವ ಶ್ರೀರಾಮಕೃಷ್ಣರಿಗೆ ವಿಶೇಷವಾದ ವಾತ್ಸಲ್ಯ. ಲಾಟುವಿನ ಕುರಿತು ಅಪಾರವಾದ ಪ್ರೀತಿ-ಕರುಣೆಗಳಿಂದ ಕೂಡಿದ್ದ ಶ್ರೀರಾಮಕೃಷ್ಣರು ಅವನಿಗೆ ಅಕ್ಷರಾಭ್ಯಾಸ ಮಾಡಬೇಕೆಂದು ಮುಂದಾದರು. ಬರೆಯಲು ಸ್ಲೇಟು, ಬಳಪಗಳನ್ನು ತರಿಸಿ ಸ್ವತಃ ಶ್ರೀರಾಮಕೃಷ್ಣರೇ ಗಂಗಾ ತೀರದಲ್ಲಿ ಕುಳಿತು ಲಾಟುವಿಗೆ ಅಕ್ಷರಾಭ್ಯಾಸ ಮಾಡಲು ಪ್ರಯತ್ನಿಸಿದರು. ಹಲವು ಬಾರಿ ನಡೆಸಿದ ಪ್ರಯೋಗಗಳು ವಿಫಲವಾದವು. 'ಪುಸ್ತಕ ವಿದ್ಯೆ ನಿನಗೆ ಸಲ್ಲದು. ಇರಲಿ....' ಎಂದು ಶ್ರೀರಾಮಕೃಷ್ಣರು ಶಿಷ್ಯ ಲಾಟುವನ್ನು ಸಮಾಧಾನ ಪಡಿಸಿ ಅವನನ್ನು ಅನುಗ್ರಹಿಸಿದರು. ಅದರಂತೆ ಲಾಟುವು ವಿದ್ಯೆಗಳಲ್ಲೆಲ್ಲಾ ಹೆಚ್ಚಿನದಾದ ಅಧ್ಯಾತ್ಮ ವಿದ್ಯೆಯನ್ನು ಕಲಿತು ಪಾರಂಗತನಾಗಿ ಸ್ವಾಮಿ ಅದ್ಭುತಾನಂದ ಎಂಬುದಾಗಿ ವಿಖ್ಯಾತರಾಗಿ ಮುಂದೆ ಭಕ್ತರಿಗೆಲ್ಲಾ ಶಾಂತಿ, ಬೆಳಕುಗಳ ಕೇಂದ್ರವಾದರು.

ಶ್ರೀರಾಮಕೃಷ್ಣರ ಗೃಹೀಭಕ್ತ ರಾಮಚಂದ್ರದತ್ತನು ಕಲ್ಕತ್ತೆಯ ತನ್ನ ಮನೆಯಲ್ಲಿ ಊಳಿಗವೃತ್ತಿಗೆಂದು ನೇಮಿಸಿಕೊಂಡ ಹಳ್ಳಿಯ ಬಾಲಕನೇ ಲಾಟು. ಅವನ ಮೂಲ ಹೆಸರು ರಕ್ತೂರಾಮ. ರಾಮಚಂದ್ರದತ್ತನು ತಮ್ಮ ಆರಾಧ್ಯದೇವ ಗುರುದೇವ ಶ್ರೀರಾಮಕೃಷ್ಣರಿಗೆ ಹಣ್ಣು ಮತ್ತು ಸಿಹಿತಿಂಡಿಗಳನ್ನು ತಮ್ಮ ಮನೆಯಿಂದ ರಕ್ತೂರಾಮನೊಡನೆ ಕೊಟ್ಟು ಕಳುಹಿಸುತ್ತಿದ್ದನು. ರಕ್ತೂರಾಮನು ಶ್ರೀರಾಮಭಕ್ತ ಆಂಜನೇಯನಂತೆ ಭಕ್ತಿಯಿಂದ ಶ್ರೀರಾಮಕೃಷ್ಣರ ಸೇವೆ ಮಾಡಿದ. ಕೊನೆಗೊಂದು ದಿವಸ ರಾಮಚಂದ್ರದತ್ತನ ಮನೆಯ ಆಳು ರಕ್ತೂರಾಮ ದಕ್ಷಿಣೇಶ್ವರದಲ್ಲಿ ದೇವಮಾನವ ಶ್ರೀರಾಮಕೃಷ್ಣರ ಆಪ್ತಸೇವಕನಾಗಿ ನೇಮಕಗೊಳ್ಳುವಂತಾಯಿತು. ರಕ್ತೂರಾಮನು ಶ್ರೀರಾಮಕೃಷ್ಣರ ಪಾಲಿಗೆ ಪ್ರೀತಿಯ 'ಲಾಟೂ' ಆದ. ಸೇವಕನಾಗಿ ಶ್ರೀರಾಮಕೃಷ್ಣರ ಬಳಿ ಬಂದು ಸೇರಿದ ರಕ್ತೂರಾಮ ಭಕ್ತನಾಗಿ, ಶಿಷ್ಯನಾಗಿ ಶ್ರೀರಾಮಕೃಷ್ಣರನ್ನು ಗುರುದೇವರೆಂದು ನಂಬಿ ಪೂರ್ಣ ಶರಣಾಗತನಾಗಿ ಆತ್ಮಾನಂದದ ಸಿದ್ಧಿ ಹೊಂದಿದ ಕಥೆ ನಿಜಕ್ಕೂ ರೋಚಕ, ರೋಮಾಂಚಕಾರಿ!

ಭಗವಾನ್ ಶ್ರೀರಾಮಕೃಷ್ಣರ ಬೋಧಾಮೃತ ಗಂಗೆಯಲ್ಲಿ ದಿನ ದಿನವೂ ಮಿಂದು ಧನ್ಯರಾದ ಸ್ವಾಮಿ ಅದ್ಭುತಾನಂದರ ಬಳಿ ಸಾರಿದ ಭಕ್ತರಿಗೆ, ವಿಚಾರಪ್ರಿಯರಿಗೆ, ಕುತೂಹಲಿಗಳಿಗೆ ಅವರು ನೀಡುತ್ತಿದ್ದ ಉಪದೇಶ, ಹೇಳುತ್ತಿದ್ದ ಮಾತುಗಳು ವೇದೋಪನಿಷತ್ತುಗಳ ಸತ್ತ್ವ ಸಂಪನ್ನವಾಗಿದ್ದವು.



ಸ್ವಾಮಿ ಅದ್ಭುತಾನಂದರು

ಒಮ್ಮೆ ಸ್ವಾಮಿ ಅದ್ಭುತಾನಂದರ ಬಳಿಗೆ ಇಬ್ಬರು ಪಾಶ್ಚಾತ್ಯ ಮಹಿಳೆಯರು ಬಂದರು. ಸಮಾಜಸೇವೆಯ ವಿಚಾರವಾಗಿ ಮಾತನಾಡಿದರು. ಅವರಿಗೆ ದೇವರಲ್ಲಿ ನಂಬಿಕೆ ಇರಲಿಲ್ಲ. ಆದರೆ ಮಾನವ ಸೇವೆಯಲ್ಲಿ ವಿಶ್ವಾಸ ತಳೆದವರಾಗಿದ್ದರು. ಅವರನ್ನುದ್ದೇಶಿಸಿ 'ನೀವು ಇತರರಿಗೆ ಏಕೆ ಒಳಿತನ್ನು ಮಾಡಬೇಕು? ಸೇವೆಯನ್ನು ಮಾಡಬೇಕು?' ಎಂದು ಸ್ವಾಮಿಗಳು ಕೇಳಿದರು. ಮುಂದುವರಿದು 'ಮಾನವೀಯ ಹಿತಸಾಧನೆಯ ಕೆಲಸಕಾರ್ಯಗಳು ಸಮಾಜದ ಒಳಿತನ್ನೇ ಗುರಿಯಾಗಿಟ್ಟುಕೊಂಡಿವೆ. ಆದರೆ ಸ್ವಲ್ಪ ಸಮಯದನಂತರ ಈ ಮಾನವೀಯ ಸೇವಾಕಾರ್ಯಗಳಲ್ಲಿ ನಿರಾಸಕ್ತಿ, ಬೇಸರ ಬರುವ ಸಾಧ್ಯತೆ ಇದೆ. ಆದರೆ ನೀವು ದೇವರನ್ನು ನಂಬಿ ಅದೇ ದೇವರು ಎಲ್ಲೆಲ್ಲೂ ಇದ್ದಾನೆ, ನಾವು ಮಾಡುವ ಮಾನವೀಯ ಸೇವೆ ಅವನಿಗೆ ಸಲ್ಲುವುದಾಗಿದೆ ಎಂಬ ಭಾವನೆಯಿಂದ ಮಾಡಿದರೆ ನಿಮ್ಮ ಕೆಲಸಗಳಲ್ಲಿ ನಿಮಗೆ ಬತ್ತದ ಉತ್ಸಾಹ, ಶಾಂತಿ, ಸಂತೋಷಗಳು ಉಂಟಾಗುತ್ತವೆ. ಏಕೆಂದರೆ ನಿಮ್ಮಲ್ಲಿ ಇರುವ ಭಗವಂತನೇ ಇತರರಲ್ಲೂ ನೆಲಸಿದ್ದಾನೆ' ಎಂದು ಹೇಳಿದರು. ಅಷ್ಟರಲ್ಲಿ ಅವರ ಪೈಕಿ ಒಬ್ಬ ಮಹಿಳೆಯು 'ಒಬ್ಬನೇ ಭಗವಂತನು ನಮ್ಮಲ್ಲಿ ಹಾಗೂ ಇತರರಲ್ಲಿ ನೆಲಸಿರುತ್ತಾನೆ ಎಂಬುದನ್ನು ನೀವು ರುಜುವಾತು ಪಡಿಸಬಲ್ಲಿರಾ?' ಎಂದು ಕೇಳಿದಳು. 'ಏಕೆ ಸಾಧ್ಯವಿಲ್ಲ?' ಎಂದು ಕೇಳಿದ ಸ್ವಾಮಿಗಳು, 'ಅದು ಅನುಭವಕ್ಕೆ ಸೇರಿದ ವಿಚಾರ. ಪ್ರೇಮವೆಂದರೇನು ಎಂದು ಬಣ್ಣಿಸಲು ಸಾಧ್ಯವಿಲ್ಲ, ಪ್ರೀತಿ ಮಾಡುವವರಿಗೆ ಮತ್ತು ಮಾಡಿಸಿಕೊಳ್ಳುವವರಿಗೆ ಮಾತ್ರ ಅದು ಅರ್ಥವಾಗುತ್ತದೆ. ಹಾಗೆಯೇ ದೇವರ ವಿಚಾರವೂ ಕೂಡ. ದೇವರನ್ನು ಪ್ರೀತಿಸುವವರಿಗೆ ಅವನಿಂದ ಕೃಪೆಯನ್ನು ಪಡೆದವರಿಗೆ ದೇವರ ವಿಚಾರ, ಇರವು ಎಲ್ಲವೂ ಅರ್ಥವಾಗುತ್ತದೆ' ಎಂದು ಹೇಳಿ ಸನಾತನ ಹಿಂದೂಧರ್ಮದ ತತ್ತ್ವ ವಿಚಾರವನ್ನು ಸುಲಭವಾದ ರೀತಿಯಲ್ಲಿ ಅವರಿಗೆ ತಿಳಿಸಿ ಸಮಾಧಾನ

ಹೇಳಿದರು.

ಶರಣಾಗತಿಯ ಫಲ ಸಿಗಲಿಲ್ಲ ಎಂದು ಅದನ್ನು ಕೈಬಿಡುವವರು ಸಾಧನೆಯ ಪಥದಲ್ಲಿ ಹಲವರಿರುವರು. ಸಾಕಷ್ಟು ಯತ್ನ ನಡೆಸದೆ 'ವಿಫಲ' ಎನ್ನುವವರ ಗುಂಪಿಗೆ ಸೇರಿದವರೇ ಶರಣಾಗತಿಯ ಮಹಿಮೆಯನ್ನು ಅಲ್ಲ ಗಳೆಯುವವರಾಗಿರುತ್ತಾರೆ. ತಾಳ್ಮೆ, ನಿಷ್ಠೆ, ಶಿಸ್ತು, ಭಕ್ತಿ ಇವುಗಳಿಂದ ಕೂಡಿದ್ದರೆ ಮಾತ್ರ ಶರಣಾಗತಿ ಎನ್ನು ವುದು ಭಗವಂತನ ಸಾಕ್ಷಾತ್ಕಾರಕ್ಕೆ ಅನು ಕೂಲವಾದ ಸಾಧನೆ ಆದೀತು. ಸ್ವಾಮಿ ಅದ್ಭುತಾನಂದರು ತಮ್ಮ ಸರ್ವಸ್ವವನ್ನೂ ಭಗವಾನ್ ಶ್ರೀರಾಮಕೃಷ್ಣರ ಪದತಲದಲ್ಲಿ ಸಮರ್ಪಿಸಿ ಅವರನ್ನೇ ತನ್ನ ಬಾಳಿನ ಗುರು, ದೇವರು ಏಕೈಕ ಸಾಧನಾ ಗುರಿ ಎಂದು ನಂಬಿ ಅವರಿಗೇ ಶರಣಾದರು. ಅವರ ಕೃಪೆಯಿಂದ ಕೊನೆಗೆ ಭಗವತ್ಸಾಕ್ಷಾತ್ಕಾರವನ್ನು ಹೊಂದಿ ಪೂಜ್ಯಪಾದರಾದರು.

**ಆಂತರಿಕವಾಗಿ ನೀನು ದೇವರಲ್ಲಿ ಶರಣಾದರೆ ಆಗ ಅವನು ನಿನ್ನ ಎಲ್ಲ ಅಡಚಣೆ ಗಳನ್ನೂ ದೂರಮಾಡುವನು. ಆದರೆ ವಾಙ್ಮನಸ್ಸುಗಳನ್ನು ಒಂದು ಮಾಡಿ ಅವನಲ್ಲಿ ಶರಣಾಗಬೇಕು.**

***–ಸ್ವಾಮಿ ಅದ್ಭುತಾನಂದ***

ಭಕ್ತರೊಬ್ಬರು ಸ್ವಾಮಿ ಅದ್ಭುತಾನಂದರ ಬಳಿ ಬಂದು ಮಾತ ನಾಡುತ್ತಾ ತನಗೆ ದೇವರಲ್ಲಿ ನಂಬಿಕೆ ಕಡಿಮೆ ಆಗಿದೆ ಎಂದರು. ಸ್ವಾಮಿಗಳು ಕೂಡಲೇ ಅವರಿಗೆ 'ನೀವು ದೇವರನ್ನು ನಂಬಿರುವುದು, ಅವನಲ್ಲಿ ಶರಣಾಗಿ ಹೊಂದಿಕೊಂಡಿರುವುದು ತೀರಾ ಕಡಿಮೆ. ನಿಮ್ಮ ನಂಬಿಕೆ ದುರ್ಬಲ. ನಿಮ್ಮ ಇಚ್ಛೆಗೆ ತಕ್ಕಂತೆ ಎರಡು ದಿನಗಳಲ್ಲಿ ಫಲ ಬರದಿದ್ದರೆ ನೀವು ದೇವರನ್ನು ಮರೆತುಬಿಡುತ್ತೀರಿ, ಬಿಟ್ಟು ಬಿಡುತ್ತೀರಿ. ನಿಮ್ಮ ಯೋಜನೆಯಂತೆ ಸ್ವೇಚ್ಛೆಯಿಂದ ನೀವೇ ದೇವರಿಗಿಂತ ಹೆಚ್ಚು ಬುದ್ಧಿವಂತರೆಂದು ತಿಳಿದುಕೊಂಡು ಕಾರ್ಯೋನ್ಮುಖರಾಗುತ್ತೀರಿ. ನಿಜವಾದ ಶರಣಾಗತಿ ಎಂದರೆ ಎಂತಹ ಸಂದರ್ಭ ಬಂದರೂ, ಎಷ್ಟೇ ಕಠಿಣವಾದ ಕಷ್ಟ, ನಷ್ಟಗಳು ಬಂದರೂ ಒಂದಿಷ್ಟೂ ನೀವು ದೇವರ ಮೇಲಿನ ನಂಬುಗೆಯಲ್ಲಿ ಅಲು ಗಾಡದೆ ಇರುವುದೇ ಆಗಿದೆ' ಎಂದು ಹೇಳಿ ದರು.

ಹೀಗೆ ಭಗವಂತನಲ್ಲಿ, ಶರಣಾಗತಿಗೆ ಒಂದು ಉಜ್ವಲ ನಿದರ್ಶನವಾದ ಬದುಕನ್ನು ಬಾಳುತ್ತಾ ಸ್ವಾಮಿ ಅದ್ಭುತಾನಂದರು ಭಕ್ತವೃಂದದವರಿಗೆಲ್ಲಾ ಭಗವಂತನ ಮಹಿಮೆಯನ್ನು ಹೇಳುತ್ತಾ, ಅವರೆಲ್ಲರ ಗೌರವಾದರಗಳಿಗೆ ಪಾತ್ರರಾದರು. ಕೊನೆಗೆ ೧೯೨೦ನೇ ಇಸವಿ ಏಪ್ರಿಲ್ ೨೪ರಂದು ಪವಿತ್ರ ಕಾಶಿಮಹಾಕ್ಷೇತ್ರದಲ್ಲಿ ಮಹಾಸಮಾಧಿಯನ್ನು ಹೊಂದಿದರು. ಇದೀಗ ಎಂಟು ದಶಕಗಳ ಹಿಂದೆ ಭುವಿಯಿಂದ ಕಣ್ಮರೆಯಾದ ಸ್ವಾಮಿ ಅದ್ಭುತಾನಂದರ ದಿವ್ಯಜೀವನ-ಸಂದೇಶಗಳು ಸಾಧಕರು ಹಾಗೂ ಭಕ್ತರಿಗೆ ಇಂದಿಗೂ ಪ್ರಸ್ತುತವಾಗಿದ್ದು ಶಕ್ತಿ-ಸ್ಫೂರ್ತಿಗಳ ಬೆಳಕಾಗಿ ಬೆಳಗುತ್ತಿವೆ.

✻

ಸ್ವಾಮಿ ಅದ್ಭುತಾನಂದರು : ಒಂದು ದಿನ ದಕ್ಷಿಣೇಶ್ವರದಲ್ಲಿ ಭಕ್ತನೊಬ್ಬನು ಅಸಭ್ಯರೀತಿಯಲ್ಲಿ ವರ್ತಿಸುತ್ತಿರು ವುದನ್ನು ಕಂಡು ನಾನವನಿಗೆ ತುಂಬಾ ಗದರಿಸಿದೆ. ನನ್ನ ಮಾತನ್ನು ಕೇಳಿ ಅವನು ಬಹಳ ನೊಂದುಕೊಂಡನು. ಭಕ್ತನ ವ್ಯಥೆಯನ್ನು ಶ್ರೀರಾಮಕೃಷ್ಣರು ಅರಿತರು. ಭಕ್ತನು ಹೊರಟು ಹೋದ ಮೇಲೆ ಅವರು ನನಗೆ, 'ಇಲ್ಲಿಗೆ ಬರುವವರಿಗೆ ಆ ರೀತಿ ಕಟೂಕ್ತಿಗಳನ್ನು ನುಡಿಯುವುದು ತರವಲ್ಲ. ಇಲ್ಲಿಯೂ ನೀನು ಆ ರೀತಿ ಅವರನ್ನು ಗದರಿಸಿ ಮನನೋಯಿಸಿದರೆ ಅವರೆಲ್ಲಿಗೆ ಹೋಗುವುದು? ಸಾಧು ಸಂಗದಲ್ಲಿರುತ್ತಾ ನಿಷ್ಠುರವಾಗಿ ಮಾತನಾಡಬಾರದು. ಜನರ ಮನಸ್ಸಿಗೆ ದುಃಖ ವನ್ನುಂಟುಮಾಡುವ ಮಾತುಗಳನ್ನಾಡಬಾರದು.' ಮತ್ತೆ, 'ನಾಳೆ ಅವನಲ್ಲಿಗೆ ಹೋಗಿ ಅವನ ಮನಸ್ಸಿಗೆ ಸಮಾಧಾನ ವಾಗುವ ರೀತಿಯಲ್ಲಿ ಎರಡು ಮಾತು ಹೇಳಿ ಬಾ' ಎಂದು ನನಗೆ ಆದೇಶವಿತ್ತರು.

ಮರುದಿನ ಅಲ್ಲಿಗೆ ಹೋದೆ, ಆದರೆ ನನ್ನ ಮನಸ್ಸಿನಲ್ಲಿ ತುಂಬಾ ಅಭಿಮಾನ ಉಂಟಾಯಿತು. ಆದರೂ, ಅವನಿಗೆ ಅನೇಕ ರೀತಿಯಲ್ಲಿ ಸಮಾಧಾನ ಹೇಳಿ ಬಂದೆ. ಹಿಂತಿರುಗಿ ಬಂದ ಮೇಲೆ ಅವರು ಏನು ಹೇಳಿದರು ಗೊತ್ತೆ? 'ನೀನು ಅವನ ಬಳಿ ಮಾತನಾಡಲು ಹೋಗಿದ್ದಾಗ ನನ್ನ ಪ್ರಣಾಮವನ್ನು ಅವನಿಗೆ ತಿಳಿಸಿದೆಯಾ?' ಶ್ರೀರಾಮಕೃಷ್ಣರ ಮಾತನ್ನು ಕೇಳಿ ನಾನು ಅವಾಕ್ಕಾದೆ! ಅವರು ಮತ್ತೆ ಹೇಳಿದರು, 'ಹೋಗು, ಹೋಗು, ಬೇಗ ಹೋಗಿ ನನ್ನ ಪ್ರಣಾಮವನ್ನು ಅವನಿಗೆ ತಿಳಿಸಿ ಬಾ' ಎಂದು. ನಾನು ಮತ್ತೆ ಹೋಗಿ ಅವನಿಗೆ ಪ್ರಣಾಮವನ್ನು ತಿಳಿಸಿದಾಗ ಅವನು ಅಳತೊಡಗಿದನು. ಅವನು ಅಳುವುದನ್ನು ಕಂಡು ನನ್ನ ಮನಸ್ಸಿಗೂ ತುಂಬಾ ವ್ಯಥೆಯಾಯಿತು. ನಾನು ಮರಳಿ ದಕ್ಷಿಣೇಶ್ವರಕ್ಕೆ ಬಂದಮೇಲೆ ಶ್ರೀರಾಮಕೃಷ್ಣರು 'ಈಗ ನಿನ್ನ ಅಪರಾಧವೆಲ್ಲವೂ ನಿವಾರಣೆಯಾಯಿತು' ಎಂದು ಹೇಳಿದರು.